# ನೀವು ಕೇಳಿದಿರಿ?

ಕಾವ್ಯಶ್ರೀ, ಶೋರಾಪುರ
ಚಿಕ್ಕ ಮಗುವಿನ ಭಾಷೆ ಯಾವುದು?




ತನ್ನ ಗೊಂಬೆಗಳಿಗಷ್ಟೇ ಅರ್ಥವಾಗುವ 'ಟಾಯ್‌ನುಡಿ'.

ಚನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ಪ್ರೀತಿ, ಪ್ರೇಮ, ಪ್ರಣಯಗಳಲ್ಲಿ ಯಶಸ್ವಿಯಾಗುವುದು ಹೇಗೆ?
ಕ್ರಮವಾಗಿ ದಾಸ, ನಲ್ಲ, ರಸಿಕನಾಗಿ.

ವಿಜಯ ಬಿದರಹಳ್ಳಿ, ಹಿರೇಹಡಗಲಿ
ವಾದಕ್ಕೂ, ವಾಗ್ವಾದಕ್ಕೂ ವ್ಯತ್ಯಾಸವೇನು?
ಒಂದೆಡೆ ನಿಂತು ಚರ್ಚಿಸುವುದು ವಾದ; walk ಮಾಡುತ್ತಾ ಚರ್ಚಿಸುವುದು ವಾ(ಕ್ವಾ)ಗ್ವಾದ.

ವಿ. ಹೇಮಂತಕುಮಾರ್, ಬೆಂಗಳೂರು
ಇಲ್ಲಿ ನಾವೆಲ್ಲರೂ ಪ್ರಯಾಣಿಕರೇ ಅಲ್ಲವೇ?
ಟಿಕೆಟ್ ಕೊಡಲೆಂದು ಕೆಲವರು ಕುವೈದ್ಯರೂ ಇದ್ದಾರೆ.

ಮಲ್ಲಿಕಾರ್ಜುನ, ಸುರಧೇನುಪುರ
ಅಪ್ಪ ಆಲದ ಮರ. ಅಮ್ಮ?



ಅವನನ್ನು ಎತ್ತಿಹಿಡಿಯುವ ಬಿಳಲು.

ಎಂ.ಸಿ. ಧನ್ಯತಾ, ಬೆಂಗಳೂರು
'ಕುಡುಕರ ಸಂಗ ಅಭಿಮಾನ ಭಂಗ' ಎನ್ನುವುದೇಕೆ?
ಕಿಕ್ ಏರಿದಾಗ 'ಗRum' ಆಗಿ ಅವಾಚ್ಯ ನುಡಿಗಳನ್ನು 'Beerವರಲ್ಲ'!

ಅನಸೂಯ ಟಿ., ಕೇದಿಗೆಮನೆ
ಮಹಾಭಾರತದಲ್ಲಿ ದುಶ್ಶಾಸನನು ದ್ರೌಪದಿಯನ್ನು ವಿವಾಹವಾಗಿದ್ದರೆ ಏನಾಗುತ್ತಿತ್ತು?
ದ್ರೌಪದಿ ಬೋರ್ಡಿಗೆ ಇಲ್ಲದ ಕ್ಯಾರೆಕ್ಟರ್ ಆಗಿರುತ್ತಿದ್ದಳು.

ಚಿಕ್ಕೋಬನಹಳ್ಳಿ ಚಾಂದ್ ಬಾಷ, ತಳಕು
ಆಪ್ತರೇ ಪ್ರತ್ಯಸ್ತ್ರ ಹೂಡಿ, ಕಡುವೈರಿಯೇ ಆತ್ಮಸಾಕ್ಷಿಯ ನುಡಿದರೂ, ನೀವ್ಯಾರೆಂಬ ಹೆಸರಾಟದಿ ಸೋಲಲಾರಿರಾ?
'ಸುಧಾ'ಳ ಮನವೊಲಿಸಿ ನಲ್ಮೆಯಿಂ ಕೇಳ್ಕೊಡೆ ಈ ನಾಮರಹಸ್ಯಂ ಅದೃಶ್ಯಂ ಗಡಾ!

ವಿ.ಎಸ್. ಗುರುಶಿವಮೂರ್ತಿ, ಬೆಂಗಳೂರು
ಹೊಟ್ಟೆಪಾಡಿಗೂ, ನಾಯಿಪಾಡಿಗೂ ಏನು ವ್ಯತ್ಯಾಸ?
ಹೊಟ್ಟೆಪಾಡು ಜೀವನೋಪಾಯ; ನಾಯಿಪಾಡು ಜೀವನ with noಪಾಯ.

ಭಾರತೀ ಗಂಗಾಧರ್, ಬೆಂಗಳೂರು
ಒಳ್ಳೆಯ ಕೆಲಸಗಳಿಗಿಂತ ಕೆಟ್ಟ ಸಂಗತಿಗಳು ಹೆಚ್ಚು ಪ್ರಚಾರ ಪಡೆಯುತ್ತವಲ್ಲಾ?
ಒಳಿತು ಆಯಿತೆಂದರೆ ಆಯಿತು. ಕೆಡುಕು ಹೇಗೆ, ಎಲ್ಲಿ, ಯಾರು, ಏಕೆಗಳನ್ನು ಹುಟ್ಟುಹಾಕುತ್ತಲ್ಲ.

ರಾಜೀವ್ ಎನ್. ಮಾಗಲ್, ಸಕಲೇಶಪುರ
ಪತ್ನಿಯು ಪತಿದೇವರನ್ನು ಏಕವಚನದಲ್ಲಿ ಸಂಬೋಧಿಸುವುದು ಪ್ರೇಮವೋ, ಸಲಿಗೆಯೋ?
ಏಕಾಂತದಲ್ಲಿ ಪ್ರೇಮ; ಮನೆಯಲ್ಲಿ ಸಲಿಗೆ; ಎಲ್ಲರೆದುರು ಕೊರಳೆತ್ತಿ ಕೂಗಿದರೆ ಬಾಸಿಸಂ.

ಶ್ರುತಿ ರಿಗ್ರೆಟ್ ಐಯ್ಯರ್, ಅಮೆರಿಕ
ನಾಲಿಗೆ ಉದ್ದ ಚಾಚಬೇಡ ಎನ್ನುತ್ತಿದ್ದರು. ಏಕೆ ಸಾರ್?
ಚಾಚಿದ ನಾಲಿಗೆಯ ನುಡಿಗಳು 32 ಹಲ್ಲುಗಳಿಗೆ 'ಹೊರಕ್ಕೆ ದಾರಿ' ತೋರಬಹುದೆಂದು.

ಲಕ್ಷ್ಮಣ್ ಗೊರ್ಲಕಟ್ಟೆ, ಮೈಸೂರು
'ಪ್ಯೂರ್ ವೆಜ್' ಹೋಟೇಲ್‌ಗಳು ಇವೆ; ಇಲ್ಲಿ 'ಪ್ಯೂರ್' ಎಂದರೆ ಏನು ಅರ್ಥ?
ತರಕಾರಿಯನ್ನು ತೊಳೆದಿರುತ್ತಾರೆ ಎಂದು!

ಪಿ.ಜೆ. ರಾಘವೇಂದ್ರ, ಮೈಸೂರು
ರಾಜಕೀಯಕ್ಕೂ, ರಾಜಾಕಾಲುವೆಗೂ ಏನಾದರೂ ವ್ಯತ್ಯಾಸವಿದೆಯೆ?
ರಾಜಾಕಾಲುವೆ ಒಂದಲ್ಲ ಒಂದು ದಿನ ಹೊಲಸಿಲ್ಲದೆ ಶುದ್ಧವಾದೀತು.


## ಬಹುಮಾನಿತ ಪ್ರಶ್ನೆ

ವಾಸಣ್ಣ, ಧಾರವಾಡ
ನನಗೆ ಸಾವಿನ ಭಯವಿಲ್ಲ. ಆದರೆ ಸತ್ತ ನಂತರ ಸುಡುವುದನ್ನು ನೆನೆದರೆ ಭಯವಾಗುತ್ತದೆ...?
ದೇಹದಾನ ಮಾಡಿ ಧೈರ್ಯವಾಗಿ ಸಾಯಿರಿ!

ಎಲ್‌ಐಸಿ ವಿಜೇಂದ್ರ, ಮೈಸೂರು
ಇತ್ತೀಚೆಗೆ ಹೆಂಗಸರೆಲ್ಲಾ 'ಸಣ್ಣ ಕತೆ' ಬರೆಯಲು ಪ್ರಾರಂಭಿಸಿದ್ದಾರಲ್ಲ?
ಇನ್‌ಸ್ಟಾ, ವಾಟ್ಸಾಪ್‌ಗಳ ನಡುವೆ ದೊಡ್ಡ ಕತೆ ಬರೆಯಲು ಸಮಯ ಸಿಗದಂತೆ.

ರತ್ನಜ, ಮೈಸೂರು
ಅರ್ಥವಿಲ್ಲದ ಪ್ರಶ್ನೆಗೆ ಸುಮ್ಮನಿರುವುದೇ ಉತ್ತರವಂತೆ. ಹೌದೇ ರಾಮ್?
ನೀವು ಕೇಳಿದುದಕ್ಕೆ ಉತ್ತರಿಸದ ಹಿಂದಿನ ಮರ್ಮವನ್ನು ಅರಿತಿದ್ದಕ್ಕೆ ಥ್ಯಾಂಕ್ಸ್!

ಬಿ. ಚಂದ್ರೇಗೌಡ, ಬೆಂಗಳೂರು
ನವವಿವಾಹಿತರ ಸಂಕಲ್ಪ ಹೇಗಿರಬೇಕು?



ಅಷ್ಟವಿವಾಹಿತರ ಸಂಕಲ್ಪದಂತೆಯೇ.

ಎಸ್.ಸಿ. ರಮೇಶ್, ಮೈಸೂರು
ಸಾಕ್ಸ್ ಇಲ್ಲದೆ ಶೂ ಧರಿಸುವುದು ಫ್ಯಾಷನ್ನೋ, ಬಿಡುವಿಲ್ಲದಿರುವುದಕ್ಕೋ?
ತಮ್ಮದೇ 'ಕೆರವಸ್ತ್ರ'ದ ವಾಸನೆಯ ಅಲರ್ಜಿ.

ಎಸ್.ಆರ್. ಅಯ್ಯರ್
ನಾಟಿ ವೈದ್ಯನಿಗೂ, ಇಂಗ್ಲಿಷ್ ವೈದ್ಯನಿಗೂ ಏನು ಅಂತರ?
ಇವನು ಕೊಡುವುದು ಹರ್ಬಲ್; ಅವನು ಕೊಡುವುದು ಹರಿಯೇ ಬಲ್ಲ.

■ ರಾಮ್